ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 116 ಜಿಪಸ 2013(ಪಿ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು ದಿನಾಂಕ:20-09-2013

## ಅಧಿಕೃತ ಜ್ಞಾಪನ

ವಿಷಯ: ಭಾರತದ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಪ್ರತಿದಿನ ಹಾರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 116 ಜಿಪಸ 2013(ಪಿ-1) - ದಿನಾಂಕ: 30.07.2013

******

ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಪ್ರತಿದಿನ ರಾಷ್ಟ್ರ ಧ್ವಜವನ್ನು ಹಾರಿಸಲು ಸೂಚನೆಗಳನ್ನು ಹಾಗೂ ಪ್ರಮುಖ ಧ್ವಜ ಸಂಹಿತೆ ವಿವರಗಳನ್ನು ನೀಡಲಾಗಿದೆ.

ರಾಷ್ಟ್ರ ಧ್ವಜವನ್ನು ಏರಿಸುವ ಹಾಗೂ ಇಳಿಸುವ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಉತ್ತೇಜನವನ್ನು ನೀಡಲು ಈ ಕೆಳಕಂಡ ದರಗಳಂತೆ ಧ್ವಜಾರೋಹಣ ಭತ್ಯೆಯನ್ನು ಪಾವತಿಸಲು ಸೂಚಿಸಲಾಗಿದೆ.

| ಕ್ರ.ಸಂ. | ಪಂಚಾಯತ್ ರಾಜ್ ಸಂಸ್ಥೆಗಳ ಹೆಸರು | ಪಾವತಿಸಬೇಕಾಗಿರುವ ಭತ್ಯೆ(ಪ್ರತಿದಿನ) | ಒಟ್ಟು (ರೂ.ಗಳಲ್ಲಿ) |
|---|---|---|---|
| 1 | ಗ್ರಾಮ ಪಂಚಾಯತಿ | ರೂ. 15+15 | 30/- |
| 2 | ತಾಲ್ಲೂಕು ಪಂಚಾಯತಿ | ರೂ. 15+15 | 30/- |
| 3 | ಜಿಲ್ಲಾ ಪಂಚಾಯತಿ | ರೂ. 15+15 | 30/- |

ಭತ್ಯೆಗಳ ವೆಚ್ಚವನ್ನು ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಕಛೇರಿ ವೆಚ್ಚ/ಸ್ವಂತ ಸಂಪನ್ಮೂಲ ನಿಧಿಗಳಿಂದ ಭರಿಸುವುದು.

S. Ravindrakumar 20/9/13
(ಎಸ್.ರವೀಂದ್ರಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

R 20.09.13

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇವರ ಮೂಲಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಲುಪಿಸುವುದು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು
4. ನಿರ್ದೇಶಕರು, ರಾಜ್ಯ ಪತ್ರಾಗಾರ, ವಿಕಾಸಸೌಧ, ಬೆಂಗಳೂರು.